ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ, ರಾಯಚೂರು
ADIKAVI SRI MAHARSHI VALMIKI UNIVERSITY, RAICHUR
Krishna Tunga Campus, Mantralay Road(N.H. 167),Yergera -584133, Raichur,Karnataka
ಪರೀಕ್ಷಾ ವಿಭಾಗ
Email: registrarevrur@gmail.com

ಸಂಖ್ಯೆ: ಆಶ್ರೀಮವಾವಿರಾ/ಪರೀಕ್ಷಾ/2025-26/714 ದಿನಾಂಕ: 10-12-2025

**ಸ್ನಾತಕ(UG) I, III ಮತ್ತು Vನೇ ಸೆಮಿಸ್ಟರ್‌ಗಳ ಬಿಎ/ಬಿಕಾಂ/ಬಿಬಿಎ/ಬಿಸಿಎ/ಬಿಎಸ್ಸಿ/ಬಿಎಸ್‌ಡಬ್ಲ್ಯೂ ಪರೀಕ್ಷೆಗಳಲ್ಲಿ ಕಡ್ಡಾಯವಾಗಿ ಅನುಸರಿಸಬೇಕಾದ ಸೂಚನೆಗಳು.**

## ಪ್ರಾಂಶುಪಾಲರುಗಳಿಗೆ ಸೂಚನೆಗಳು

1. ಅರ್ಹತೆ ಹೊಂದಿರುವ ವಿದ್ಯಾರ್ಥಿಗಳ ಹಾಜರಾತಿ/ I.A ಅಂಕಗಳನ್ನು ಕಡ್ಡಾಯವಾಗಿ ನಮೂದಿಸಲೇಬೇಕು. ನಮೂದಿಸದಿದ್ದರೆ ಅಥವಾ ತಡವಾಗಿ I.A ಅಂಕಗಳನ್ನು ಹಾಕಿದರೆ ವಿಷಯ ಉಪನ್ಯಾಸಕ, HOD, ಕಾಲೇಜಿನ ಮೇಲೆ ಪ್ರತಿ ವಿದ್ಯಾರ್ಥಿಗೆ 200/- ರೂಪಾಯಿಗಳ ದಂಡವನ್ನು ವಿಧಿಸಲಾಗುವುದು. ಈ ಮಾಹಿತಿಯನ್ನು ಪ್ರಾಂಶುಪಾಲರು HODಗೆ ತಿಳಿಯಪಡಿಸತಕ್ಕದ್ದು.
2. ಕೇವಲ ಆಂತರಿಕ ಅಂಕಗಳನ್ನು ಹೊಂದಿರುವ ವಿಷಯಗಳಾದ NSS/NCC/Sports ಆಂತರಿಕ ಅಂಕಗಳನ್ನು ಕಡ್ಡಾಯವಾಗಿ UUCMS ನಲ್ಲಿ ನಮೂದಿಸಬೇಕು. ಇಲ್ಲದಿದ್ದರೆ ವಿದ್ಯಾರ್ಥಿಗಳ ಫಲಿತಾಂಶ ಪ್ರಕಟವಾಗುವುದಿಲ್ಲ.
3. ಲಿಖಿತ ಪರೀಕ್ಷೆ ನಡೆದ ದಿನವೇ ಹಾಜರಾತಿಯನ್ನು ಅಪಡೇಟ್ ಮಾಡಬೇಕು. ಹಾಜರಾತಿಯನ್ನು ತಪ್ಪಾಗಿ ಹಾಕಿದಲ್ಲಿ ಆ ಕಾಲೇಜಿನ ಪ್ರಾಂಶುಪಾಲರೇ ನೇರ ಹೊಣೆಗಾರರಾಗುತ್ತಾರೆ.
4. OMR ಶೀಟ್ ಭರ್ತಿ ಮಾಡುವಾಗ ಎಚ್ಚರಿಕೆಯಿಂದ ವಿದ್ಯಾರ್ಥಿಗಳಿಗೆ ಮಾಹಿತಿ ನೀಡಿ ನೋಂದಣಿ ಸಂಖ್ಯೆಯನ್ನು ಸರಿಯಾಗಿ ಬಬ್ಲಿಂಗ್(Bubbling) ಮಾಡಬೇಕು. ಇಲ್ಲದಿದ್ದರೆ ಫಲಿತಾಂಶವು ಪ್ರಕಟವಾಗುವುದಿಲ್ಲ.
5. ಲಿಖಿತ ಪರೀಕ್ಷೆಗಳಲ್ಲಿ MPC ಆದ ವಿದ್ಯಾರ್ಥಿಗಳ ಮಾಹಿತಿಯನ್ನು ಕಡ್ಡಾಯವಾಗಿ UUCMS ನಲ್ಲಿ ಪ್ರಾಂಶುಪಾಲರು ಅಪಡೇಟ್ ಮಾಡಬೇಕು.
6. MPC ಆದ ವಿದ್ಯಾರ್ಥಿಗಳ ಉತ್ತರ ಪತ್ರಿಕೆಗಳನ್ನು ಪ್ರತ್ಯೇಕವಾಗಿ ಸಂಗ್ರಹಿಸಿ ಸೀಲ್ ಮಾಡಿ ಕಳುಹಿಸಬೇಕು. ಇಲ್ಲವಾದಲ್ಲಿ ಅಂತಹ ಪ್ರಾಂಶುಪಾಲರುಗಳಿಗೆ 1000 ರೂಪಾಯಿಗಳ ದಂಡವನ್ನು ವಿಧಿಸಲಾಗುವುದು.
7. ಕಾಲೇಜಿನ ಬಿಲ್‌ಗಳನ್ನು ಸಲ್ಲಿಸುವಾಗ 'A' Formನ್ನು ಉಪನ್ಯಾಸಕರ ಪಟ್ಟಿಯಂತೆ ಜೋಡಿಸಿ ಮೌಲ್ಯಮಾಪನ ವಿಭಾಗಕ್ಕೆ ಕಡ್ಡಾಯವಾಗಿ ಸಲ್ಲಿಸಬೇಕು.
8. GST ಹೊಂದಿರುವ ಸ್ಟೇಷನರಿ ಬಿಲ್‌ಗಳನ್ನು ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ಬಿಲ್‌ಗಳನ್ನು ಕಳುಹಿಸಬೇಕು.
9. ಕಿರಿಯ ಮೇಲ್ವಿಚಾರಕರನ್ನು ನಿಯೋಜಿಸುವಾಗ ಆ ದಿನ ನಡೆಯುತ್ತಿರುವ ಪರೀಕ್ಷಾ ವಿಷಯಗಳನ್ನು ಬೋಧಿಸುತ್ತಿರುವ ಉಪನ್ಯಾಸಕರನ್ನು ಆ ಕೊಠಡಿಗೆ ನಿಯೋಜಿಸಬಾರದು.
10. ಕಡ್ಡಾಯವಾಗಿ ಕಿರಿಯ ಮೇಲ್ವಿಚಾರಕರು ಹಾಗೂ ವಿದ್ಯಾರ್ಥಿಗಳು ಯಾವುದೇ ಸ್ಮಾರ್ಟ್‌ಫೋನ್‌ನ್ನು ಪರೀಕ್ಷೆ ನಡೆಯುವ ಕೊಠಡಿಯಲ್ಲಿ ಇಡಬಾರದು. ಇಟ್ಟರೆ ಕಿರಿಯ ಮೇಲ್ವಿಚಾರಕರು ಹಾಗೂ ವಿದ್ಯಾರ್ಥಿಗಳ ಮೇಲೆ ರಾಯಚೂರು ವಿಶ್ವವಿದ್ಯಾಲಯದ ಪರೀಕ್ಷಾ ನಿಯಮಾವಳಿ ಅನ್ವಯ ಕ್ರಮ ಜರುಗಿಸಲಾಗುವುದು.

11. ವಿದ್ಯಾರ್ಥಿಗಳು ಕಡ್ಡಾಯವಾಗಿ ಪ್ರವೇಶ ಪತ್ರ ಮತ್ತು ಕಾಲೇಜಿನ ಗುರುತಿನ ಚೀಟಿ ಜೊತೆಗೆ ಮಾನ್ಯತೆ ಇರುವ ಯಾವುದಾದರೊಂದು ಗುರುತಿನ ಚೀಟಿ(ಆಧಾರ್‌ಕಾರ್ಡ್, ಪಾನ್‌ಕಾರ್ಡ್, ಮತದಾರರ ಗುರುತಿನ ಚೀಟಿ) ಹಾಜರುಪಡಿಸಿದಲ್ಲಿ ಮಾತ್ರ ವಿದ್ಯಾರ್ಥಿಗಳಿಗೆ ಪರೀಕ್ಷೆ ಬರೆಯಲು ಅನುಮತಿಸಲಾಗುವುದು.

12. **ಪರೀಕ್ಷಾ ಕೇಂದ್ರಗಳಿಗೆ ಟ್ಯಾಗ್ ಮಾಡಿದ ಕಾಲೇಜುಗಳು ಕಡ್ಡಾಯವಾಗಿ ಜ್ಯೂನಿಯರ್ ಸೂಪರ್‌ವೈಸರನ್ನು ನಿಯೋಜಿಸತಕ್ಕದ್ದು.** ಅವರನ್ನು ಹೊರತುಪಡಿಸಿ ಪರೀಕ್ಷಾ ಕೇಂದ್ರಗಳಿಗೆ ಕಾಲೇಜಿನ ಮ್ಯಾನೇಜ್‌ಮೆಂಟ್ ಸಿಬ್ಬಂದಿ, ಪ್ರಾಂಶುಪಾಲರು ಹಾಗೂ ಇತರೆ ಸಿಬ್ಬಂದಿಗಳಿಗೆ ಯಾವುದೇ ಕಾರಣಕ್ಕೆ ಪ್ರವೇಶ ಇರುವುದಿಲ್ಲ ಹಾಗೇನಾದರು ನಿಯಮ ಉಲ್ಲಂಘಿಸಿದಲ್ಲಿ ಪರೀಕ್ಷಾ ಕೇಂದ್ರವು ಲಿಖಿತ ರೂಪದಲ್ಲಿ ವಿಶ್ವವಿದ್ಯಾಲಯಕ್ಕೆ ದೂರು ನೀಡತಕ್ಕದ್ದು ವಿಶ್ವವಿದ್ಯಾಲಯದ ನಿಯಮಾನುಸಾರ ಕ್ರಮ ಜರುಗಿಸಲಾಗುವವುದು.

13. ಪ್ರತಿ ಕಿರಿಯ ಮೇಲ್ವಿಚಾರಕರು 'A' Formನಲ್ಲಿ ಬರೆದಿರುವ ಉತ್ತರ ಪತ್ರಿಕೆಯ ಸಂಖ್ಯೆ ಹಾಗೂ ಉತ್ತರ ಪತ್ರಿಕೆ ಮೇಲೆ ಬರೆದಿರುವ ನೋಂದಣಿ ಸಂಖ್ಯೆಯನ್ನು ಕಡ್ಡಾಯವಾಗಿ ಪರಿಶೀಲಿಸಬೇಕು.

14. **ಪ್ರತಿದಿನದ ಪ್ರಶ್ನೆಪತ್ರಿಕೆಗಳ ತೆಗೆಯುವ ಮತ್ತು ವಿತರಿಸುವ ವೀಡೀಯೊ ಮತ್ತು ಫೋಟೋಸ್‌ನ್ನು ಕಡ್ಡಾಯವಾಗಿ rurexams@gmail.comಗೆ ಕಳುಹಿಸಬೇಕಾಗಿ ಈ ಮೂಲಕ ಆದೇಶಿಸಲಾಗಿದೆ.**

15. ವರ್ಗಾವಣೆ ಹೊಂದಿದ ವಿದ್ಯಾರ್ಥಿಗಳ ಫಲಿತಾಂಶ ಪ್ರಕಟವಾಗಿರುವುದಿಲ್ಲ. ಆದಕಾರಣ ವರ್ಗಾವಣೆಯಾದ ವಿದ್ಯಾರ್ಥಿಗಳಿಗೆ ಮ್ಯಾನುವಲ್ Hallticket ನೀಡಲಾಗಿದ್ದು, ಅಂತಹ ವಿದ್ಯಾರ್ಥಿಗಳ Hallticketಗಳನ್ನು ಅಂಗೀಕರಿಸಿ ಪರೀಕ್ಷೆ ಬರೆಯಲು ಅನುಮತಿ ನೀಡಬೇಕೆಂದು ಎಲ್ಲಾ ಪರೀಕ್ಷಾ ಕೇಂದ್ರಗಳ ಪ್ರಾಂಶುಪಾಲರುಗಳಿಗೆ ಈ ಮೂಲಕ ಸೂಚಿಸಲಾಗಿದೆ.

10/12/25

ಕುಲಸಚಿವರು (ಮೌಲ್ಯಮಾಪನ)
ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ, ರಾಯಚೂರು

10/12/25